**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 614 |
| 2 | ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ BMTF ಯಾವ ಕಾರ್ಯವಿಧಾನದಡಿ ಕಾರ್ಯನಿರ್ವಹಿಸುತ್ತಿದೆ; | ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್‌ಫೋರ್ಸ್ ಅನ್ನು ಸರ್ಕಾರದಿಂದ ಆದೇಶ ಸಂಖ್ಯೆ: ಯುಡಿಡಿ 247 ಎಂಎನ್‌ಯು 1995, ದಿನಾಂಕ:19-03-1996 ರಂತೆ ಅಂದಿನ ಬೆಂಗಳೂರು ಸಿಟಿ ಕಾರ್ಪೋರೇಷನ್, ಬಿ.ಡಿ.ಎ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು ಹಾಗೂ ಕೊಳಚೆ ನಿರ್ಮೂಲನಾ ಮಂಡಳಿ ವ್ಯಾಪ್ತಿಯಲ್ಲಿನ ಸರ್ಕಾರಿ ಆಸ್ತಿಗಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ಹಾಗೂ ಇವುಗಳ ಒತ್ತುವರಿಯ ಬಗ್ಗೆ ಪ್ರಕರಣ ದಾಖಲಿಸಿ ವಿಚಾರಣೆ ಮಾಡಲು ಹಾಗೂ ಸರ್ಕಾರಿ ಜಮೀನನ್ನು ಅತಿಕ್ರಮಿಸಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಉದ್ದೇಶದಿಂದ ಸೃಜಿಸಲಾಗಿದೆ. ಬಿ.ಎಂ.ಟಿ.ಎಫ್ ನಿಂದ ಈ ಕೆಳಕಂಡ ಕಲಂ ಮತ್ತು ಕಾಯ್ದೆಗಳ ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.<br>1) ಕರ್ನಾಟಕ ಮುನ್ಸಿಪಲ್ ಕಾಯ್ದೆ, 1964<br>2) ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ, 1976<br>3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1976<br>4) ಕರ್ನಾಟಕ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ, 1964<br>5) ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ, 1973<br>6) ಕರ್ನಾಟಕ ಭೂ ಕಂದಾಯ ಕಾಯ್ದೆ, 1964<br>7) ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961<br>8) ಪೊಲೀಸ್ ಕಾಯ್ದೆ, 1963<br>9) ಇಂಡಿಯನ್ ಪೀನಲ್ ಕೋಡ್ / ಭಾರತೀಯ ನ್ಯಾಯ ಸಂಹಿತೆ.<br>10) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1985 |
| ಆ) | BMTF ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲಿಸಿದೆ, ಅವುಗಳಲ್ಲಿ ಎಷ್ಟು ಪ್ರಕರಣಗಳು ಅಂತಿಮ ಹಂತ ತಲುಪಿದ್ದು, ಎಷ್ಟು ಸರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ; | ಅನುಬಂಧ-1 ರಲ್ಲಿ ಒದಗಿಸಿದೆ.<br>ಸರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳುವುದು BMTF ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ. |

| | | |
|---|---|---|
| ಇ) | BMTFಗೆ ಬಂದಿರುವ ದೂರುಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲು ಸರ್ಕಾರ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದೇ; ಇಲ್ಲದಿದ್ದರೆ, ಅಂತಹ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾರದ ಉದ್ದೇಶವಿದೆಯೇ; | ➢ ಕರ್ನಾಟಕ ಭೂ ಕಂದಾಯ ಕಾಯ್ದೆ, ಬೆಂಗಳೂರು ಜಲಮಂಡಳಿ ಕಾಯ್ದೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅಪರಾಧ / ಪ್ರಕರಣಗಳಿಗೆ ಆರೋಪಪಟ್ಟಿ ಸಲ್ಲಿಸುವ ಅವಧಿಯು ಸಾಮಾನ್ಯವಾಗಿ ಭಾರತೀಯ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (ಬಿಎನ್‌ಎಸ್‌ಎಸ್)/ಸಿಆರ್‌ಪಿಸಿ ನಡಾವಳಿಗಳಿಗೆ ಒಳಪಟ್ಟಿರುತ್ತದೆ.<br>➢ ಈ ಕಾಯ್ದೆಗಳಡಿ ನಿಗದಿಪಡಿಸಲಾದ ಶಿಕ್ಷೆಯ ಪ್ರಮಾಣವನ್ನು ಆಧರಿಸಿ ಚಾರ್ಜ್ ಶೀಟ್ ಸಲ್ಲಿಸುವ ಕಾಲಮಿತಿ ನಿರ್ಧರಿತವಾಗುತ್ತದೆ. |
| ಈ) | ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉದ್ಯಾನಗಳು, ಕೆರೆಗಳು, ರಾಜಕಾಲುವೆಗಳು ಮತ್ತು ಇತರೆ ಸಾರ್ವಜನಿಕ ಆಸ್ತಿಗಳ ಅತಿಕ್ರಮಣ ತಡೆಗಟ್ಟುವಲ್ಲಿ BMTF ಕೈಗೊಂಡಿರುವ ಕ್ರಮಗಳ ವಿವರವೇನು; | ಈ ಸಂಬಂಧ ಪ್ರಕರಣಗಳನ್ನು ದಾಖಲು ಮಾಡಿ ತನಿಖೆಯನ್ನು ಕೈಗೊಂಡು ಸಾರ್ವಜನಿಕ ಸ್ಥಿರಾಸ್ತಿ ಒತ್ತುವರಿ / ಅತಿಕ್ರಮಣಕಾರರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿ ಅವರುಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸುವ ಮುಖಾಂತರ ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಬಿ.ಎಂ.ಟಿ.ಎಫ್ ಕಡೆಯಿಂದ ಕ್ರಮ ತೆಗೆದುಕೊಳ್ಳಲಾಗಿದೆ. |
| ಉ) | BMTF ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಮಹಾನಗರದಲ್ಲಿ ಎಷ್ಟು ಅನಧಿಕೃತ ಬಡಾವಣೆಗಳಿಗೆ ನೋಟೀಸ್ ನೀಡಲಾಗಿದೆ; ಅವುಗಳಲ್ಲಿ ಎಷ್ಟು ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲಾಗಿದೆ ಮತ್ತು ಅವುಗಳಲ್ಲಿ ಎಷ್ಟು ಪ್ರಕರಣಗಳು ಮುಕ್ತಾಯಗೊಂಡಿವೆ? | ಸಾರ್ವಜನಿಕರು, ವ್ಯಾಪ್ತಿಯಲ್ಲಿನ ಪ್ರಾಧಿಕಾರ / ಪಾಲಿಕೆ/ ಮಂಡಳಿಗಳ ಅಧಿಕಾರಿಗಳು ನೀಡುವ ದೂರಿನ ಆಧಾರದ ಮೇಲೆ ಬಿ.ಎಂ.ಟಿ.ಎಫ್ ಘಟಕದಿಂದ ತನಿಖೆಯನ್ನು ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಲಾಗುತ್ತದೆ. ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸುವುದು ಬಿ.ಎಂ.ಟಿ.ಎಫ್ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.<br>2023 ರಿಂದ ಇಲ್ಲಿವರೆಗೆ ಕ್ರಮ ಕೈಗೊಂಡಿರುವ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಊ) | BMTF ನಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ? | ಬಿ.ಎಂ.ಟಿ.ಎಫ್.ನಲ್ಲಿನ ಹುದ್ದೆಗಳನ್ನು ನಿಯೋಜನೆಯ ಮೇರೆಗೆ ಭರ್ತಿ ಮಾಡಲು ಅವಕಾಶವಿದ್ದು, ಸರ್ಕಾರ ಹಾಗೂ ಪೊಲೀಸ್ ಇಲಾಖೆಯಿಂದ ನಿಯಾಮಾನುಸಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿರುತ್ತದೆ.<br>ಬಿ.ಎಂ.ಟಿ.ಎಫ್ ನಲ್ಲಿನ ಹುದ್ದೆಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಿದೆ. |

**ನಅಇ 314 ಎಂಎನ್‌ಯು 2026**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

## ಅನುಬಂಧ–1

| ಕ್ರ ಸಂ. | ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ದೋಷಾರೋಪಣಾ ಪಟ್ಟಿ ಸಲ್ಲಿಸಿರುವ ಪ್ರಕರಣಗಳು | ನ್ಯಾಯಾಲಯದಲ್ಲಿ ತಡೆಯಾಜ್ಞೆ ಆದೇಶ ಇರುವ ಪ್ರಕರಣಗಳು | ತನಿಖೆಯಲ್ಲಿರುವ ಪ್ರಕರಣಗಳು |
|---|---|---|---|---|---|
| 1 | 2023 | 68 | 42 | 2 | 24 |
| 2 | 2024 | 60 | 46 | 3 | 11 |
| 3 | 2025 | 273 | 150 | 2 | 121 |
| 4 | 2026 | 18 | 3 | 1 | 14 |
| ಒಟ್ಟು | | **419** | **241** | **8** | **170** |

## ಅನುಬಂಧ–2

## ನೋಟೀಸ್ ನೀಡಿರುವ ಮತ್ತು ಮುಕ್ತಾಯವಾದ ಪ್ರಕರಣಗಳ ವಿವರಗಳು

| ಕ್ರ ಸಂ | ವರ್ಷ | ಅನಧಿಕೃತ ಬಡಾವಣೆಗಳಿಗೆ ನೀಡಿರುವ ನೋಟೀಸ್‌ಗಳ ಸಂಖ್ಯೆ | ಮುಕ್ತಾಯವಾದ ಪ್ರಕರಣಗಳ ಸಂಖ್ಯೆ |
|---|---|---|---|
| 1 | 2023 | 188 | 94 |
| 2 | 2024 | 340 | 125 |
| 3 | 2025 | 223 | 86 |
| 4 | 2026 | 229 | 60 |
| | ಒಟ್ಟು | **980** | **365** |

ಅನುಬಂಧ-3

## BMTF Vacancy Position as on 17-08-2026

| Sl. No. | Designation | Sanction Strength | Actual Strength | Vacancy |
|---|---|---|---|---|
| 1 | ADGP [IPS] | 1 | 1 | 0 |
| 2 | Addl. Commissioner [KAS] | 1 | 1 | 0 |
| 3 | Joint Director | 1 | 1 | 0 |
| 4 | Superintendent of Police | 1 | 1 | 0 |
| 5 | Deputy Superintendent of Police | 1 | 1 | 0 |
| 6 | Revenue Officer | 1 | 0 | 1 |
| 7 | Town Planning Deputy Director | 1 | 0 | 1 |
| 8 | Town Planning Assistant Director | 2 | 1 | 1 |
| 9 | Town Planner | 4 | 0 | 4 |
| 10 | Assistant Town Planer | 8 | 0 | 8 |
| 11 | Police Inspector | 2 | 2 | 0 |
| 12 | Police Sub-Inspector | 4 | 4 | 0 |
| 13 | Police Head Constable | 19 | 19 | 0 |
| 14 | Police Constable | 16 | 12 | 4 |
| 15 | Section Superintendent | 1 | 1 | 0 |
| 16 | Stenographer | 4 | 0 | 4 |
| 17 | FDA | 4 | 1 | 3 |
| 18 | SDA | 4 | 2 | 2 |
| 19 | Typist | 5 | 0 | 5 |
| 20 | Group-D | 4 | 0 | 4 |